# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ಸರ್ವಜ್ಞನಗರ ವಿದಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.28 ಕಮ್ಮನಹಳ್ಳಿಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ: 05-01-2019 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು***

1. ಶ್ರೀಮತಿ ಡಿ.ಮುನಿಲಕ್ಷ್ಮಮ್ಮ, ಅಧ್ಯಕ್ಷರು, (ಬಿ.ಬಿ.ಎಂ.ಪಿ ಸದಸ್ಯರು)
2. ಶ್ರೀ ಸುರೇಶ್, ಸದಸ್ಯರು
3. ಶ್ರೀ ಪಿ. ಮುರುಳೀಧರ್, ಸದಸ್ಯರು
4. ಶ್ರೀ ಅರವಿಂದ್ ಸುನೀಲ್‌ರಾಜ್, ಸದಸ್ಯರು
5. ಶ್ರೀ ಸುಬ್ರಮಣಿ, ಸದಸ್ಯರು
6. ಶ್ರೀಮತಿ ಸರೋಜಮ್ಮ

ಈ ಸಭೆಗೆ ಹಾಜರಾಗಿದ್ದ ಮೇಲ್ಕಂಡ ಅಧ್ಯಕ್ಷರು, ಸದಸ್ಯರು ಹಾಗೂ ವಾರ್ಡಿನ ಕಾರ್ಯದರ್ಶಿ/ ನೋಡಲ್ ಅಧಿಕಾರಿಗಳು ರವರನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. **ಶ್ರೀ ಅರವಿಂದ್ ಸುನೀಲ್ ರಾಜ್** ವಾರ್ಡ್ ಸಮಿತಿಯ ಸದಸ್ಯರು ಮಾತನಾಡುತ್ತಾ, ಶ್ರೀ ಸಾಗರ್ ಹೋಟೆಲ್ ಹತ್ತಿರ ಕಸವನ್ನು ಹನ್ನೊಂದು ದಿನಗಳಿಂದ ತೆಗೆಯುತ್ತಿಲ್ಲ ಎಂದು ಹೇಳಿರುತ್ತಾರೆ. ಮುನಿಯಪ್ಪ ಲೇಔಟ್, 3ನೇ ಅಡ್ಡರಸ್ತೆ, ಸುಬ್ರಮಣಿ ದೇವಸ್ಥಾನದ ರಸ್ತೆಯ ಚರಂಡಿಯ ಸಮಸ್ಯೆ, ಹಾಗೂ ಜಯಲಕ್ಷ್ಮೀ ಶಾಲೆಯ ರಸ್ತೆಯಲ್ಲಿ ಛೇಂಬರ್ ಎತ್ತರ ಮಾಡಬೇಕು. ಮತ್ತು ವಾಲ್ ಮೆನ್ ಸಾಗರ್ ಕುರಿತು ದೂರು ನೀಡಿರುತ್ತಾರೆ. ಹಾಗೂ ಜ್ಯೋತಿ ಬೇಕರಿ ರಸ್ತೆಯಲ್ಲಿ ಸಿಎಂಸಿ ಪೈಪ್ ಲೈನ್ ಅಳವಡಿಸಬೇಕು.
   - ಅದರಂತೆ ಮೇಲೆ ತಿಳಿಸಿರುವ ಸುಬ್ರಮಣಿ ದೇವಸ್ಥಾನದ ರಸ್ತೆ ಮತ್ತು ಚರಂಡಿಯನ್ನು ಎಸ್.ಐ.ಪಿ ಅನುದಾನದಲ್ಲಿ ಮಂಜೂರು ಆಗಿದ್ದು ಕಾಮಗಾರಿಯನ್ನು ಪ್ರಾರಂಭಿಸುತ್ತೇವೆ. ಹಾಗೂ ಜ್ಯೋತಿ ಬೇಕರಿ ರಸ್ತೆಯಲ್ಲಿ ಪಿ.ಒ.ಡಬ್ಲ್ಯೂ – 2018-19 ಸಾಲಿನ ತುರ್ತು ಅನುದಾನದಲ್ಲಿ ಸೇರಿಸಲಾಗುವುದು.

   - (ಕ್ರಮ :- ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ವತಿಯಿಂದ ನಿರ್ವಹಿಸುವುದು.)
   - (ಕ್ರಮ:- ಬಿಬಿಎಂಪಿ ಘನತ್ಯಾಜ್ಯ ವಿಭಾಗದಿಂದ ನಿರ್ವಹಿಸುವುದು)

2. **ಶ್ರೀ. ಮುರಳಿ** ವಾರ್ಡ್ ಸಮಿತಿಯ ಸದಸ್ಯರು ಮಾತನಾಡುತ್ತಾ, ವಾರ್ಡಿನ ಎಲ್ಲಾ ಪಾರ್ಕ್‌ಗಳಲ್ಲಿ ಬೀದಿ ದೀಪ ಉರಿಯುತ್ತಿಲ್ಲಾ ಎಂದು ದೂರು ನೀಡಿರುತ್ತಾರೆ. ಹಾಗೂ ಓಪೆನ್ ಜಿಮ್‌ಗೆ ಸಂಬಂಧಿಸಿದ ಉಪಕರಣಗಳು, ಕಸಕ್ಕೆ ಬೆಂಕಿ ಹಚ್ಚುತ್ತಾರೆ, ಮಾಂಸದ ಅಂಗಡಿಗಳು ಕಸವನ್ನು ಚರಂಡಿಯಲ್ಲಿ ಹಾಕುತ್ತಾರೆ, ಪೌರ ಕಾರ್ಮಿಕರ ಬಗ್ಗೆ ಮಾಹಿತಿ ಪೌರ ಕಾರ್ಮಿಕರ ಹೆಸರಲ್ಲಿ ಬೇರೆಯವರು ಪಂಚ್ ಮಾಡುತ್ತಾರೆ ಹೌಸಿಂಗ್ ಬೋರ್ಡ್ ಹತ್ತಿರ ಸರ್ಕಾರಿ ಆಸ್ತಿಯ ವಿವರಗಳನ್ನು ಕೊಡಬೇಕೆಂದು ತಿಳಿಸಿರುತ್ತಾರೆ, ಕಮ್ಮನಹಳ್ಳಿ ಮುಖ್ಯರಸ್ತೆಯ ಕನಕದಾಸ ರಸ್ತೆಯಲ್ಲಿ ಶಿಲ್ಟ್ ತೆಗೆಸಬೇಕು ಮತ್ತು ರಸ್ತೆಯನ್ನು ಮಾಡಬೇಕು, ಎಲ್ ಇ ಡಿ ದೀಪದ ಬಗ್ಗೆ ತಿಳಿಸಿರುತ್ತಾರೆ. ರಾಮಯ್ಯ ರಸ್ತೆ, ನಾರಾಯಣಪ್ಪ ರಸ್ತೆಯಲ್ಲಿ ಬೋರ್‌ವೆಲ್ ಹಾಕಬೇಕೆಂದು ತಿಳಿಸಿರುತ್ತಾರೆ, ಮುನೇಶ್ವರ ದೇವಸ್ಥಾನ ರಸ್ತೆ ಹಾಗೂ ಎಂ.ಎಸ್. ನಗರ ರಸ್ತೆಯಲ್ಲಿ ಪ್ರತಿದಿನವೂ ಕಸವನ್ನು ತೆಗೆಸಬೇಕು.

- ಅದರಂತೆ ಮೇಲೆ ತಿಳಿಸಿರುವ ಜಿಲ್ಲಾ ಮಂತ್ರಿ ಅನುದಾನದಲ್ಲಿ 2018–19 ಸಾಲಿನ ಮೂರು ಬೋರ್‌ವೆಲ್‌ಗಳನ್ನು ಮಂಜೂರು ಆಗಿದ್ದು ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸುತ್ತೇವೆ.

- (ಕ್ರಮ:– ಬಿಬಿಎಂಪಿ ಘನತ್ಯಾಜ್ಯ ವಿಭಾಗದಿಂದ ನಿರ್ವಹಿಸುವುದು)
- (ಕ್ರಮ:– ಬಿಬಿಎಂಪಿ ವಿದ್ಯುತ್ ವಿಭಾಗದಿಂದ ನಿರ್ವಹಿಸುವುದು)

3. **ಶ್ರೀ.ಸುರೇಶ್** ವಾರ್ಡ್ ಸಮಿತಿಯ ಸದಸ್ಯರು ಮಾತನಾಡುತ್ತಾ, ಬಚ್ಚಪ್ಪ ರಸ್ತೆಯಲ್ಲಿ ಚರಂಡಿಯ ಸ್ಲಾಬ್‌ಗಳು ಹಾಕಬೇಕು, ಕಮ್ಮನಹಳ್ಳಿ ಸುತ್ತಮುತ್ತಲೂ ಪಾದಾಚಾರಿ ಸಮಸ್ಯೆ, ತರಕಾರಿ ಮತ್ತು ಹಣ್ಣಿನ ಅಂಗಡಿಗಳು ಪಾದಾಚಾರಿ ಮಾರ್ಗವನ್ನು ಬಳಸುತ್ತಿದ್ದಾರೆ. ನಾರಾಯಣಪ್ಪ ರಸ್ತೆಯ ಪಾರ್ಕ್ ಹತ್ತಿರ ಕಸದ ಸಮಸ್ಯೆ ಹೇಳಿರುತ್ತಾರೆ.

- ಅದರಂತೆ ಮೇಲೆ ತಿಳಿಸಿರುವ ಬಚ್ಚಪ್ಪ ರಸ್ತೆಯ ಚರಂಡಿಯನ್ನು ಎಸ್.ಐ.ಪಿ ಅನುದಾನದಲ್ಲಿ ಮಂಜೂರಾಗಿದ್ದು ಕಾಮಗಾರಿಯು ಚಾಲ್ತಿಯಲ್ಲಿವೆ.

- (ಕ್ರಮ:– ಬಿಬಿಎಂಪಿ ಘನತ್ಯಾಜ್ಯ ವಿಭಾಗದಿಂದ ನಿರ್ವಹಿಸುವುದು)

4. **ಶ್ರೀ ಸುಬ್ರಮಣಿ** ವಾರ್ಡ್ ಸಮಿತಿಯ ಸದಸ್ಯರು ಮಾತನಾಡುತ್ತಾ, ಕಮಿಟಿ ಸದಸ್ಯರಿಗೆ ಗುರುತಿನ ಚೀಟಿಯನ್ನು ಕೊಡಬೇಕೆಂದು ತಿಳಿಸಿರುತ್ತಾರೆ. ಎಂ.ಪಿ ಅನುದಾನದಲ್ಲಿ ಯಾವುದೇ ಕೆಲಸ ನಡೆದಿರುವುದಿಲ್ಲ, ನೀರಿನ ಘಟಕದ ಬಗ್ಗೆ ಹೇಳಿರುತ್ತಾರೆ. ಪಾಲಿಕೆ ಸದಸ್ಯರು ವಾರದಲ್ಲಿ ಒಂದು ದಿನ ಪಾದಯಾತ್ರೆಯನ್ನು ಹಮ್ಮಿಕೊಂಡು ವಾರ್ಡಿನ ಕುಂದು ಕೊರತೆಗಳನ್ನು ತಿಳಿಯಬೇಕು ಎಂದು ಹೇಳಿರುತ್ತಾರೆ. ಹಾಗೂ ಕಮಿಟಿ ಸದಸ್ಯರಿಗೆ ವಾರ್ಡಿನ ಇಂಜಿನಿಯರ್ ರವರು ಯಾವ ಕೆಲಸಗಳು ನಡೆಯುತ್ತಿವೆ ಹಾಗೂ ಮುಂದೆ ನಡೆಯುವ ಕೆಲಸಗಳ ಬಗ್ಗೆ ತಿಳಿಸಬೇಕು, ಕುಡಿಯುವ ನೀರಿನ ಪೈಪ್‌ಗಳು ಚರಂಡಿಯಲ್ಲಿ ಹಾದು ಹೋಗಿರುತ್ತವೆ, ಬೋರ್‌ವೆಲ್‌ಗಳ ಬಗ್ಗೆ ಮಾಹಿತಿ ನೀಡಬೇಕು, ಪೋಲಿಸ್ ಗಸ್ತು ತಿರುಗಬೇಕೆಂದು ಹೇಳಿರುತ್ತಾರೆ, ಸೀತಮ್ಮ ರಸ್ತೆಯಲ್ಲಿ ಕಸದ ಸಮಸ್ಯೆ, ರಸ್ತೆಯ ಬದಿಯಲ್ಲಿರುವಂತಹ ಎಲ್ಲಾ ಅಂಗಡಿಗಳು ಪರವಾನಗಿ ತೆಗೆದುಕೊಳ್ಳಬೇಕೆಂದು ತಿಳಿಸಿರುತ್ತಾರೆ, ಮತ್ತು ಸಮುದಾಯದ ಭವನದ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಸಿಸಿ ಕ್ಯಾಮೆರಾ ಬಗ್ಗೆ ಮಾಹಿತಿ ನೀಡಬೇಕು, ಸೀತಮ್ಮ ರಸ್ತೆಯಲ್ಲಿ ವಿದ್ಯುತ್ ಕಂಬವು ಭಾಗಿಕೊಂಡಿರುತ್ತದೆ, Empty ವಿದ್ಯುತ್ ಕಂಬಗಳನ್ನು ತೆರವುಗೊಳಿಸಬೇಕು, ಮತ್ತು ಸೊಳ್ಳೆಯ ಔಷಧ ಸಿಂಪಡಿಸುವವರು Quality ಔಷಧವನ್ನು ಬಳಸಬೇಕು.

- ಅದರಂತೆ ಮೇಲೆ ತಿಳಿಸಿರುವ 2017–18ನೇ ಸಾಲಿನಲ್ಲಿ ಒಂದು ನೀರಿನ ಘಟಕ ಮಂಜೂರು ಆಗಿದ್ದು ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸುತ್ತೇವೆ, ಬಿಬಿಎಂಪಿ ಸದಸ್ಯರು ಪಾದಯಾತ್ರೆಯನ್ನು ಹಮ್ಮಿಕೊಳ್ಳುತ್ತೇವೆ ಎಂದು ತಿಳಿಸಿರುತ್ತಾರೆ. ಮುಂಬರುವ ವಾರ್ಡ್ ಕಮಿಟಿಯಲ್ಲಿ ಕಾಮಗಾರಿಯ ಬಗ್ಗೆ ತಿಳಿಸಿರುತ್ತೇವೆ, ಪಿ.ಒ.ಡಬ್ಲ್ಯೂ ತುರ್ತು ಅನುದಾನದಲ್ಲಿ 2018–19 ನೇ ಸಾಲಿನಲ್ಲಿ ಚರಂಡಿಯಲ್ಲಿ ಹಾದು ಹೋಗಿರುವ ನೀರಿನ ಪೈಪ್‌ಗಳನ್ನು ತೆಗೆದು ಸರಿಪಡಿಸಲು ಈ ಅನುದಾನದಲ್ಲಿ ಸೇರಿಸಲಾಗುವುದು, ಮುಂಬರುವ ಅನುದಾನದಲ್ಲಿ ಸಮುದಾಯ ಭವನವನ್ನು ನಿರ್ಮಿಸಲು ಬಿಬಿಎಂಪಿ ಸದಸ್ಯರು ಚರ್ಚಿಸಿರುತ್ತಾರೆ ಈ ವಿಷಯವನ್ನು ಮುಂಬರುವ ವಾರ್ಡ್ ಕಮಿಟಿಯ ಸಭೆಯಲ್ಲಿ ತಿಳಿಸುತ್ತೇವೆ. ಈಗಾಗಲೇ ಏಳು ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ.

- (ಕ್ರಮ :– ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ವತಿಯಿಂದ ನಿರ್ವಹಿಸುವುದು.)
- (ಕ್ರಮ:– ಬಿಬಿಎಂಪಿ ಘನತ್ಯಾಜ್ಯ ವಿಭಾಗದಿಂದ ನಿರ್ವಹಿಸುವುದು)
- (ಕ್ರಮ:– ಬಿಬಿಎಂಪಿ ವಿದ್ಯುತ್ ವಿಭಾಗದಿಂದ ನಿರ್ವಹಿಸುವುದು)

5. **ಶ್ರೀಮತಿ ಸರೋಜಮ್ಮ** ವಾರ್ಡ್ ಸಮಿತಿಯ ಸದಸ್ಯರು ಮಾತನಾಡುತ್ತಾ, ವಿನಾಯಕ ಸ್ಟ್ರೀಟ್ ರಸ್ತೆಗೆ ಕಾಂಕ್ರಿಟ್ ರಸ್ತೆಯನ್ನಾಗಿ ಮಾಡಬೇಕು, ಅಂಗನವಾಡಿ ರಸ್ತೆಯಲ್ಲಿ ಚರಂಡಿಯ ಕಾಮಗಾರಿ ಮಾಡಬೇಕು, ವಿದ್ಯುತ್ ಸಮಸ್ಯೆ, ಐಟಿಸಿ ರಸ್ತೆಯಲ್ಲಿ ಕಸದ ಸಮಸ್ಯೆ, ಸೊಳ್ಳೆಯ ಔಷಧವನ್ನು ಸಿಂಪಡಿಸಬೇಕು.( FOGGING)

- ಅದರಂತೆ ಮೇಲೆ ತಿಳಿಸಿರುವ ವಿನಾಯಕ ಸ್ಟ್ರೀಟ್ ರಸ್ತೆಯನ್ನು ಈಗಾಗಲೇ ಕಾಮಗಾರಿ ಪ್ರಾರಂಭಗೊಂಡಿದೆ. ಹಾಗೂ ಮುಂಬರುವ ಅನುದಾನದಲ್ಲಿ ಅಂಗನವಾಡಿ ರಸ್ತೆಯ ಚರಂಡಿಯನ್ನು ಸೇರಿಸಲಾಗುವುದು.
- (ಕ್ರಮ:– ಬಿಬಿಎಂಪಿ ಘನತ್ಯಾಜ್ಯ ವಿಭಾಗದಿಂದ ನಿರ್ವಹಿಸುವುದು)

ಅದರಂತೆ ವಾರ್ಡ್ ಸಮಿತಿಯ ಕಾರ್ಯದರ್ಶಿ / ನೋಡೆಲ್ ಅಧಿಕಾರಿಯವರು ಮೇಲೆ ತಿಳಿಸಿರುವ ಅಂಶಗಳಿಗೆ ತ್ವರಿತವಾಗಿ ಕ್ರಮ ಕೈಗೊಳ್ಳಲು ಸೂಚಿಸಲಾಗುವುದು ಎಂದು ತಿಳಿಸಿದರು.

ಈ ಮೇಲೆ ತಿಳಿಸಿರುವ ಸದಸ್ಯರುಗಳ ಎಲ್ಲಾ ಕೆಲಸಗಳನ್ನು ಕೂಲಂಕುಶವಾಗಿ ಚರ್ಚಿಸಿ ಸಾರ್ವಜನಿಕರಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳು ಹಾಗೂ ಕುಂದು ಕೊರತೆಗಳನ್ನು ಶೀರ್ಘವಾಗಿ ಪರಿಹರಿಸಲು ತುರ್ತಾಗಿ ಕ್ರಮ ಕೈಗೊಳ್ಳಲಾಗುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ತದನಂತರ **ಶ್ರೀಮತಿ ಡಿ.ಮುನಿಲಕ್ಷ್ಮಮ್ಮರವರು,** ಬಿ.ಬಿ.ಎಂ.ಪಿ ಸದಸ್ಯರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಕಳೆದ ಬಾರಿ ಕಮಿಟಿ ಸಭೆಯಲ್ಲಿ ಕಸದ ಸಮಸ್ಯೆಯು ಹೆಚ್ಚಾಗಿದ್ದು ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಘನತ್ಯಾಜ್ಯ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.

**ಕಾರ್ಯದರ್ಶಿಗಳು ಮತ್ತು ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ**

**ಡಿ.ಮುನಿಲಕ್ಷ್ಮಮ್ಮ**
**ಅಧ್ಯಕ್ಷರು, ಬಿಬಿಎಂಪಿ ಸದಸ್ಯರು ವಾರ್ಡ್ ಸಂಖ್ಯೆ.28**
**ವಾರ್ಡ್ ಸಂಖ್ಯೆ.28 ಕಮ್ಮನಹಳ್ಳಿ**

***<u>ಪ್ರತಿಯನ್ನು</u>***

1) ಅಪರ / ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಪೂರ್ವ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂಎಸ್ಎಸ್ಬಿ) ಕಲ್ಯಾಣನಗರ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
6) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರುಗಾಲುವೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7) ಆರೋಗ್ಯ ವೈದ್ಯಾಧಿಕಾರಿಗಳು (ಸರ್ವಜ್ಞನಗರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
8) ಕಲ್ಯಾಣ ಇಲಾಖೆ ಬಿ.ಬಿ.ಎಂ.ಪಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
9) ಕಛೇರಿ ಕಡತಕ್ಕೆ.